**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ : 30-09-2023.**
**ಮುಂದುವರೆದ ಪಾಟೀ ಸವಾಲು - ವಾದಿ ಪರ ವಕೀಲರಿಂದ :**

2) ದಾವಾ ಸ್ವತ್ತಿನ ಪೂರ್ವಕ್ಕೆ ಶಂಕರಪ್ಪ ಅವರ ಜಮೀನು, ಪಶ್ಚಿಮಕ್ಕೆ ಗೋಪಾಲಪ್ಪ ಮತ್ತು ಅವರ ತಮ್ಮಂದಿರ ಜಮೀನು, ಉತ್ತರಕ್ಕೆ ರಸ್ತೆ ಮತ್ತು ದಕ್ಷಿಣಕ್ಕೆ ಆರ್. ನಾರಾಯಣಪ್ಪ ಅವರ ಜಮೀನು ಇರುತ್ತವೆ. ನಿ.ಡಿ.2 ರಲ್ಲಿ ಈ ದಾವೆಯ ವಾದಿಗಳನ್ನು ಪಕ್ಷಕಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ನಿ.ಪಿ.3 ನ್ನು ನಾನು ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿರುತ್ತೇನೆ. ಸಾಕ್ಷಿಯು ನಿ.ಪಿ.3 ನ್ನು ನೋಡಿ ಸದರಿ ದಾಖಲೆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ ಆ ಬಗ್ಗೆ ಗೊತ್ತಿದ್ದರೂ ಸಹ ನ್ಯಾಯಾಲಯಕ್ಕೆ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಾನಪತ್ರದ ಪ್ರಕಾರ ವಾದಿಗೆ ಮ್ಯುಟೇಶನ್ ಸಹ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಿ.ಪಿ.2 ರ ಬಗ್ಗೆ ನಾನು ಯಾವುದೇ ನ್ಯಾಯಾಲಯದಲ್ಲಿ ರದ್ಧತಿಗಾಗಿ ಅರ್ಜಿ ಸಲ್ಲಿಸಿರುವುದಿಲ್ಲ. ನಿ.ಪಿ.4 ರಿಂದ ನಿ.ಪಿ.13 ರ ವರೆಗೆ ಪಹಣಿ ಪತ್ರಿಕೆಗಳು ವಾದಿಯ ಹೆಸರಿನಲ್ಲಿ ಇವೆ ಎಂದರೆ ನನಗೆ ಗೊತ್ತಿಲ್ಲ. ಆ ಬಗ್ಗೆ ಗೊತ್ತಿದ್ದರೂ ಸಹ ನ್ಯಾಯಾಲಯಕ್ಕೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.20 ರಿಂದ ನಿ.ಪಿ.23 ರ ವರೆಗೆ ಛಾಯಾಚಿತ್ರಗಳಲ್ಲಿ ವಾದಿಗಳು ದಾವಾ ಸ್ವತ್ತಿನಲ್ಲಿ ತೊಗರಿ ಬೆಳೆಯನ್ನು ಬೆಳೆದಿರುತ್ತಾರೆ ಎಂದರೆ ಸರಿಯಲ್ಲ. ನಿ.ಪಿ.30 ಮತ್ತು 31 ರಂತೆ ವಾದಿ ದಾವಾ ಸ್ವತ್ತಿನ ಕಂದಾಯವನ್ನು ಪಾವತಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆ ಬಗ್ಗೆ ಗೊತ್ತಿದ್ದರೂ ಸಹ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯ ತಂದೆ ಮುನಿಶಾಮಪ್ಪ ಅವರ ತಮ್ಮ ನಾರಾಯಣಪ್ಪ ಅವರು ನಿ.ಪಿ.26 ರಂತೆ ವಿಭಾಗ ಕೋರಿ ದಾವೆ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ನಿ.ಪಿ.28 ರಲ್ಲಿ ಸಿವಿಲ್ ನ್ಯಾಯಾಲಯದ ಅದೇಶಕ್ಕೆ ಒಳಪಟ್ಟಿರುತ್ತದೆ ಎಂದು ಬರೆದಿರುತ್ತದೆ ಎದರೆ ಸರಿ. ನಾನು ಕಂದಾಯ ಅಧಿಕಾರಿಗಳ ಜೊತೆ ಶಾಮೀಲಾಗಿ ಕಾನೂನು ಬಾಹಿರವಾಗಿ ದಾವಾ ಸ್ವತ್ತಿನ ಖಾತೆ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಪ್ರತಿವಾದ ಪತ್ರ ಪ್ಯಾರಾ ಸಂಖ್ಯೆಯ 10 ರಲ್ಲಿ ಹೇಳಿದ ದೊಡ್ಡತೋಪಣ್ಣ ನಮ್ಮ ತಾತ. ಸದರಿ ದೊಡ್ಡತೋಪಣ್ಣ ದಾವಾ ಸ್ವತ್ತಿಗೆ ಕಂದಾಯ ಕಟ್ಟಿಲ್ಲ ಎಂದು ಅವರ ಅರ್ಜಿಯನ್ನು ವಜಾ ಮಾಡಿದರು

ಎಂದರೆ ಗೊತ್ತಿಲ್ಲ. ದೊಡ್ಡ ತೋಪಣ್ಣ ನಮ್ಮ ತಾತ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ನೀಡಿರುವುದಿಲ್ಲ. ನಮ್ಮ ತಾತ ದಿ.05-09-1978 ರಲ್ಲಿ ಮರಣ ಹೊಂದಿದ್ದಾರೆ ಎಂದು ತೋರಿಸಲು ದಾಖಲೆಯನ್ನು ನೀಡಿರುವುದಿಲ್ಲ. ನಾನು ದೊಡ್ಡ ತೋಪಣ್ಣನ ವಾರಸುದಾರ ಅಲ್ಲ ಎಂದರೆ ಸರಿಯಲ್ಲ. ನಾನು 1992 ರಲ್ಲಿ ಮಣಿಪಾಲದ ಸಿಂಡಿಕೇಟ್ ಬ್ಯಾಂಕಿನಲ್ಲಿ ಕೆಲಸ ಮಾಡುತ್ತಿದ್ದೆ ಎಂದರೆ ಸರಿ. 1992 ರಲ್ಲಿ ಯಾವ ಬ್ರಾಂಚ್ ನಲ್ಲಿ ಕೆಲಸ ಮಾಡುತ್ತಿದ್ದೆ ಎಂದು ನೆನಪಿಲ್ಲ. ನಾನು ದೆಹಲಿಯ ಬ್ರಾಂಚ್ ನಲ್ಲಿ ಕೆಲಸ ಮಾಡುತ್ತಿದ್ದೆ ಎಂದರೆ ಸರಿ. 1992 ರಲ್ಲಿ ದೆಹಲಿಯಲ್ಲಿ ವಾಸವಿದ್ದೆ ಎಂದರೆ ಸರಿ. ನಾನು ದಾವಾ ಸ್ವತ್ತಿನಲ್ಲಿ ಬೆಳೆ ಬೆಳೆಯುತ್ತಿರುವ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ನೀಡಿರುವುದಿಲ್ಲ. 2004 ರಲ್ಲಿ ದಾವಾ ಆಸ್ತಿ ವಾದಿಯ ತಂದೆಯ ಹೆಸರಿನಲ್ಲಿತ್ತು ಎಂದರೆ ಸರಿಯಲ್ಲ. ದಾವಾ ಆಸ್ತಿಯ ಬಗ್ಗೆ ಸರ್ಕಾರಿ ಪಡ ಎಂದು ನಮೂದು ಇರುವುದನ್ನು ದುರುಪಯೋಗ ಪಡಿಸಿಕೊಂಡು ಕಂದಾಯ ಅಧಿಕಾರ ಜೊತೆ ಶಾಮೀಲಾಗಿ ಖಾತಾ ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನನಗೂ ಮತ್ತು ದಾವಾ ಆಸ್ತಿಗೂ ಯಾವುದೇ ಸಂಬಂಧ ಇಲ್ಲದೇ ಇದ್ದರೂ ಸಹ ನ್ಯಾಯಾಲಯಕ್ಕೆ ಬಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2016 ರಲ್ಲಿ ವಾದಿಗಳ ಸ್ವಾಧೀನಕ್ಕೆ ತೊಂದರೆ ಮಾಡಿದ್ದರಿಂದ ಅವರು ಬಂದು ಈ ದಾವೆ ದಾಖಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 1974 ನೇ ಇಸವಿಯಿಂದ ದಾವಾ ಸ್ವತ್ತಿನ ಸ್ವಾಧೀನವನ್ನು ವಾದಿಗಳೇ ಹೊಂದಿದ್ದಾರೆ ಎಂದರೆ ಸರಿಯಲ್ಲ. ನನಗೂ ದಾವಾ ಸ್ವತ್ತಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲಾ.**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ.ಕೇ.ಸ.ಇ. ಎಂದು ಒಪ್ಪಿಕೊಂಡಿರುತ್ತಾರೆ,

Sd/-
**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**